# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಎಸ್.ಸಿ. / ಎಸ್ ಟಿ ನಂ. 40/2024

ಪ್ರ.ವ.ಬೋ. ದಿನಾಂಕ - 02.04.2026

| | | | |
|---|---|---|---|
| ಸಾಕ್ಷಿದಾರರ ಹೆಸರು | - ಈರಮ್ಮ | ಫ್ರಾ.ಸಾ. | - 02 |
| ತಂದೆಯ ಹೆಸರು | - ಗಂಗಾಧರ | ಚಾ.ಸಾ. | - 02 |
| ವಯಸ್ಸು | - 48 ವರ್ಷ | | |
| ಉದ್ಯೋಗ | - ವ್ಯವಸಾಯ | | |
| ವಾಸ ಸ್ಥಳ | - ಬಾಲೇನಹಳ್ಳಿ, ಹಿರಿಯೂರು ತಾಲ್ಲೂಕು | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**- ಮುಖ್ಯ ವಿಚಾರಣೆ - ಸರ್ಕಾರಿ ಅಭಿಯೋಜಕರಿಂದ -**

ಚಾಸಾ-1 ನನ್ನ ಗಂಡ, ಚಾಸಾ-6 ನನ್ನ ಮಗ. ಆರೋಪಿ ನನಗೆ ಗೊತ್ತು. ನಮ್ಮ ಊರಿನ ಸರ್ಕಾರಿ ಶಾಲೆಯ ಮುಂಭಾಗ ಮಾತನಾಡುತ್ತಿದ್ದು, ನಾನು ಅಲ್ಲಿಗೆ ಹೋಗಿ ನೋಡಿದಾಗ ಚಾಸಾ-1 ಮತ್ತು ಆರೋಪಿ ಮಾತನಾಡುತ್ತಿದ್ದರು. ಅವರ ನಡುವೆ ಯಾವುದೇ ಗಲಾಟೆ ಆಗಿಲ್ಲ. ಆರೋಪಿಯು ಚಾಸಾ-1 ಇವರಿಗೆ ಬೈದಿಲ್ಲ, ಹೊಡೆದಿಲ್ಲ. ಆರೋಪಿಯು ನನಗೆ ಹೊಡೆದಿರುವುದಿಲ್ಲ. ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುವುದಿಲ್ಲ.

(ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಅನುಮತಿ ನೀಡಲಾಯಿತು. )

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

ದಿಃ 06.10.2024 ರಂದು ಸಂಜೆ 6.00 ರ ಸಮಯದಲ್ಲಿ ನಮ್ಮ ಊರ ಮುಂದೆ ಶಾಲೆಯ ಹತ್ತಿರ ಏನೋ ಜಗಳ ಆಗುತ್ತಿದ್ದು, ಗಲಾಟೆ ನೋಡಲು ನಾನು ಮನೆಯಿಂದ ಹೊರಗೆ ಬಂದಾಗ ನನ್ನ ಗಂಡನಿಗೆ ಯಾರೋ ಹೊಡೆಯುತ್ತಿದ್ದಾರೆ ಎಂದು ಹೇಳಿದ್ದು, ಅಲ್ಲಿಗೆ ಹೋಗಿ ನೋಡಿದಾಗ ಆರೋಪಿಯು ಚಾಸಾ-1 ಇವರಿಗೆ ನಾಯಕ ಸೂಳೇಮಗನೇ ನಮ್ಮ ಜಮೀನಿಗೆ ಬಂದರೆ ಗಲಾಟೆ ಮಾಡುತ್ತಿಯಾ ಎಂದು ಬೈದು ಬಲಗೈಯಿಂದ ಚಾಸಾ-1 ಇವರ ಬಲ ದವಡೆಗೆ ಗುದ್ದಿ ಎರಡೂ ಕೈ ಬೆರಳಿಗೆ ಬಾಯಿಂದ ಕಚ್ಚಿ ಗಾಯ ಮಾಡಿದಾಗ ಅಲ್ಲಿಯೇ ಇದ್ದ ರಂಗಸ್ವಾಮಿ, ಉಮೇಶ, ಸಿದ್ದೇಶ ಜಗಳ ಬಿಡಿಸಿದ್ದು, ಆಗ ನಾನು ಜಗಳ ಬಿಡಿಸಲು

ಹೋದಾಗ ಆರೋಪಿಯು ನನ್ನನ್ನು ದಬ್ಬಿದ್ದು ನಾನು ಬಿದ್ದಿದ್ದು, ಈ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಿರಾಕರಿಸಿದ ಹೇಳಿಕೆ ಭಾಗವನ್ನು ನಿಪಿ–8 ಎಂದು ಗುರುತಿಸಲಾಯಿತು.

ನ್ಯಾಯಾಲಯದಲ್ಲಿ Technical Assistant ಮಿಥುನ್ ಕುಮಾರ್ ಇವರ ಮುಖಾಂತರ DVD ಯನ್ನು ನ್ಯಾಯಾಲಯದಲ್ಲಿರುವ ಕಂಪ್ಯೂಟರ್ ಸಿಸ್ಟಮ್ ನಲ್ಲಿ ಹಾಕಿ, ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–9 ಎಂದು ಗುರುತಿಸಲಾಯಿತು. ಪೋಲಿಸರಿಗೆ ಏನು ಮಾಹಿತಿ ನೀಡಿದ್ದೇನೆ ಎಂದು ನನಗೆ ಗೊತ್ತಿಲ್ಲ. ಆರೋಪಿಯೊಂದಿಗೆ ರಾಜಿಯಾಗಿದ್ದರಿಂದ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**– ಪಾಟೀ ಸವಾಲು – ಆರೋಪತರ ಪರವಾಗಿ ಶ್ರೀಮತಿ. ಎಂ ಬಿ ವಕೀಲರಿಂದ –**

ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ – ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.